ಸಾಕ್ಷಿಯನ್ನು ದಿನಾಂಕ **25-05-2023** ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಮ್. ಐ. ಬಿ.ವಕೀಲರಿಂದಃ**

ನಮ್ಮ ಕುಟುಂಬದ ಪಡಿತರ ಚೀಟಿಯ ನೋಟರೈಸ್ಡ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

**( ನಿಪಿ–5 ರ ದಾಖಲೆಗಳನ್ನು ಅವುಗಳ ಮೂಲಪ್ರತಿಗಳೊಂದಿಗೆ ಹೋಲಿಕೆ ಮಾಡಿ ನೋಟರೈಸ್ಡ್ ಪ್ರತಿಗಳನ್ನು ನಿಶಾನೆಗಳಾಗಿ ಗುರುತಿಸಿ ಮೂಲಪ್ರತಿಯನ್ನು ಸಾಕ್ಷಿಗೆ ಪಾಟೀ ಸವಾಲಿನ ಸಮಯದಲ್ಲಿ ಮತ್ತು ನ್ಯಾಯಾಲಯ ನಿರ್ದೇಶನ ನೀಡಿದಾಗ ಹಾಜರುಪಡಿಸಬೇಕೆಂದು ಸಾಕ್ಷಿಗೆ ಹಿಂದಕ್ಕೆ ನೀಡಲಾಯಿತು.** )

ಆದ್ದರಿಂದ ನನ್ನ ವಾದಪತ್ರದಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕಾಗಿ ಪ್ರಾರ್ಥನೆ.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಯು.ಎಸ್. ಎನ್. ವಕೀಲರಿಂದಃ**

ಜನನ ಪ್ರಮಾಣ ಪತ್ರದಲ್ಲಿ ತಿದ್ದುಪಡಿ ನನ್ನ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಬೇಕಾಗಿರುತ್ತದೆ. ಈಗ ನನ್ನ ಮಗ 1st year decree ಯಲ್ಲಿ ಓದುತ್ತಿದ್ದಾನೆ. ಬೊನಂತ್ತಾಯ ಆಸ್ಪತೆರಯಲ್ಲಿ ಮಗುವಿನ ಜನನವಾಗಿರುತ್ತದೆ. ಜನನ ಕಾಲಕ್ಕೆ ಯಾರು ಮಗುವಿನ ಮಾಹಿತಿ ಯನ್ನು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಗುವಿನ ಜನನ ಪ್ರಮಾಣ ಪತ್ರವನ್ನು ಜನನವಾದ 40 ದಿನಗಳ ಒಳಗೆ ತೆಗೆದುಕೊಂಡಿರುತ್ತೇನೆ. ಜನನ ಪ್ರಮಾಣ ಪತ್ರ ಶಾಲೆಗೆ ಸೇರಿಸುವ ಕಾಲಕ್ಕೆ ಕೊಟ್ಟಿರುತ್ತೇನೆ . ಜನನ ಪ್ರಮಾಣ ಪತರದಲ್ಲಿ ತಪ್ಪಾಗಿರುವ ವಿಚಾರ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ತಿಳಿದುಬಂದಿರುತ್ತದೆ. ಪ್ರತಿವಾದಿಯರಿಗೆ ಆಸ್ಪತೆರಯಿಂದ ಬಂದ

ಮಾಹಿತಿಯಂತೆ ಬರೆದುಕೊಂಡಿರುತ್ತಾರೆ ಅವರಿಂದ ಯಾವುದೇ ತಪ್ಪು ಆಗಿರುವುದಿಲ್ಲ ಎಂದರೆ ಸರಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಎ.ಜಿ.ಪಿ.ಯವರಿಂದಃ**

ಎ.ಜಿ.ಪಿ.ಯವರು ಯು.ಎಸ್. ಎನ್. ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿರುತ್ತಾರೆ.

**ಮರು ವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಪುತ್ತೂರು, ದ.ಕ.